

# ಹಾಡು ನಿಲ್ಲಿಸಿದ ಗಾಯಕನ 'ನೆನಪಿನಲ್ಲಿ..'

ಸುಗಮ ಸಂಗೀತದಲ್ಲಿ ಭರವಸೆಯ ಗಾಯಕರೆಂದು ಛಾಪು ಮೂಡಿಸಿದ ಸುಭಾಷ್ ಹಾರೆಗೊಪ್ಪ ಮಿಂಚಿ ಮರೆಯಾದ ಗಾಯಕ. ಅವರ ಸವಿನೆನಪಿನಲ್ಲಿ ತಂದಿರುವ 'ನೆನಪಿನಲ್ಲಿ' ಸೀಡಿ ಈಗ ಸಹೃದಯರಿಗಾಗಿ ತೆರೆದಿದೆ.

**■ ಚಿನ್ಮಯ ಎಂ.ರಾವ್ ಹೊನಗೋಡು**



ಈಗ ನಾಲ್ಕು ವರ್ಷಗಳ ಹಿಂದೆ ಕನ್ನಡ ವಾಹಿನಿಯೊಂದರಲ್ಲಿ ರಾತ್ರಿ ಹತ್ತಕ್ಕೆ ಪ್ರಸಾರವಾಗುತ್ತಿದ್ದ 'ಏಕೆ ಹೀಗೆ ನಮ್ಮ ನಡುವೆ' ಎಂಬ ಧಾರಾವಾಹಿ ನೆನಪಿದೆ ತಾನೇ? ಈ ಧಾರಾವಾಹಿ ಬಹಳ ಜನಪ್ರಿಯವಾಗಲು ಮುಖ್ಯ ಕಾರಣ ಅದರ ಶೀರ್ಷಿಕೆ ಗೀತೆ. ಮಾಧುರ್ಯಪೂರ್ಣವಾದ ಈ ಗೀತೆಗೆ ರಾಗ ಸಂಯೋಜಿಸಿ ಹಾಡಿದವರು ಸುಭಾಷ್ ಹಾರೇಗೊಪ್ಪ ಎಂಬ ಸಿರಿಕಂಠದ ಗಾಯಕ.

ಸುಭಾಷ್ ಕಂಠದಿಂದ ಹೊಮ್ಮಿದ ಅದೆಷ್ಟೋ ಹಾಡುಗಳು ಕೇಳುಗರನ್ನು ಸೆಳೆದಿತ್ತು. ಸಂಗೀತ ಕ್ಷೇತ್ರದಲ್ಲಿ ಮೆಲ್ಲಮೆಲ್ಲನೆ ಛಾಪು ಮೂಡಿಸಿ ನಾಡಿನ ಭರವಸೆಯ ಗಾಯಕ ಎಂದು ಸಾಬೀತುಪಡಿಸುವಷ್ಟರಲ್ಲಿ ವಿಧಿ ಇವರ ಜೀವದೊಂದಿಗೆ ಆಟವಾಡಿತ್ತು. ಹೀಗೆ ಸಂಗೀತದ ಸುಗಂಧ ನಾಡಿನಾದ್ಯಂತ ಪಸರಿಸುವ ಮುನ್ನವೇ ಸುಭಾಷ್ ಸದ್ದಿಲ್ಲದೆ ಸಾವಿನ ಮನೆ ಸೇರಿದ್ದರು. ಸಂಗೀತಕ್ಕೆ ಎಂದೂ ಅಳಿವಿಲ್ಲ ಎಂಬುದಕ್ಕೆ ಅವರ ಕಂಠದಿಂದ ಹೊಮ್ಮಿದ ಗೀತೆಗಳೇ ಸಾಕ್ಷಿಯಾದವು.

## ಸುಭಾಷ್ 'ನೆನಪಿನಲ್ಲಿ..'

ಅನೇಕ ಸಂಗೀತ ಪ್ರೇಮಿಗಳನ್ನು ಅಗಲಿದ ಸುಭಾಷ್, ಹಲವಾರು ಸುಮಧುರ ಗೀತೆಗಳನ್ನು ನಮಗಾಗಿ ಬಿಟ್ಟು ಹೋಗಿದ್ದಾರೆ. ಈ ಗೀತ ರತ್ನಗಳನ್ನೆಲ್ಲಾ ಸಂಗ್ರಹಿಸಿ ಅವರ ಪತ್ನಿ ಪದ್ಮಶ್ರೀ ಇದನ್ನು ಸಿ.ಡಿ ರೂಪದಲ್ಲಿ ಸುಗಮ ಸಂಗೀತ ಲೋಕಕ್ಕೆ ನೀಡಿದ್ದಾರೆ. ಈ ಸೀಡಿಗೆ 'ನೆನಪಿನಲ್ಲಿ..' ಎಂಬ ಹೆಸರೂ ಇಟ್ಟಿದ್ದಾರೆ. ಇವರ ಹೆಸರಿನಲ್ಲಿ ಸುಹಾಸಂ (ಸುಭಾಷ್ ಹಾರೆಗೊಪ್ಪ ಸಂಗೀತ) ಪ್ರತಿಷ್ಠಾನ ಹುಟ್ಟಿಕೊಂಡಿದೆ. ಕಳೆದ ಏಪ್ರಿಲ್ ಮಾಸಾಂತ್ಯದಲ್ಲಿ ಸಾಗರದ ಶ್ರೀ ಶಾರದಾಂಬಾ ಸಭಾ ಭವನದಲ್ಲಿ ಉದ್ಘಾಟನೆಯಾದ ಈ ಸಂಸ್ಥೆ ಸುಭಾಷ್ ಅವರ ಸಂಸ್ಮರಣೆಯ ಅಂಗವಾಗಿ ಹಲವು ಕಾರ್ಯಕ್ರಮಗಳನ್ನೂ ಹಾಕಿಕೊಂಡಿದೆ.

ಸುಭಾಷ್ ಅವರೇ ರಾಗ ಸಂಯೋಜಿಸಿ ಅಲ್ಲಲ್ಲಿ ಕಾರ್ಯಕ್ರಮಗಳಲ್ಲಿ ಈ ಹಿಂದೆ ಹಾಡಿರುವ ಗೀತೆಗಳ ಗುಚ್ಛ 'ನೆನಪಿನಲ್ಲಿ' ಸೀಡಿಯನ್ನು ನೀನಾಸಂನ ರಂಗಕರ್ಮಿ ಕೆ.ವಿ ಅಕ್ಷರ ಮತ್ತು ಕಿರುತೆರೆ ನಟ–ನಿರ್ದೇಶಕ ರಮೇಶ್ ಬೇಗಾರ್ ಲೋಕಾರ್ಪಣೆ ಮಾಡಿದರು.

ಸಹಜವಾಗಿ ಮಹಾನಗರಿಗಳಲ್ಲಿರುವ ಕಲಾವಿದರು ಮಾತ್ರ ವಿಜೃಂಭಿಸುತ್ತಿರುವ ಈ ಕಾಲಘಟ್ಟದಲ್ಲಿ ಸಾಗರ ಸಮೀಪದ ಗ್ರಾಮೀಣ ಭಾಗದಿಂದ ಬೆಳೆದು ಬಂದಿದ್ದ ಸುಭಾಷ್ ಇತ್ತೀಚೆಗಷ್ಟೇ ಬೆಳಕಿಗೆ ಬಂದಿದ್ದ ಪ್ರತಿಭಾವಂತರಾಗಿದ್ದರು. ಆಗಲೇ ಬಾಳಗೀತೆಗೆ ಅಂತ್ಯ ಹಾಡುವಂತಾಯಿತು. ಮೂರು ವರ್ಷಗಳ ನಂತರ ಅವರ ಭರಪೂರ 80 ಹಾಡುಗಳು ಲೋಕಾರ್ಪಣೆಯಾಗಿರುವುದು ಸಂತಸದ ಸಂಗತಿ. ಈ ಮೂಲಕವಾದರೂ ಸುಭಾಷ್ ಅವರ ವಿಶಿಷ್ಟ ಬಗೆಯ ರಾಗ ಸಂಯೋಜನೆ ಹಾಗೂ ಗಾಯನ ಶೈಲಿ ಸುಗಮ ಸಂಗೀತ ಲೋಕಕ್ಕೆ ಅರ್ಪಿಸಲ್ಪಟ್ಟಿರುವುದು ಬರೀ ಮನರಂಜನೆಗೆ ಮಾತ್ರವಲ್ಲದೆ ಅಧ್ಯಯನಕ್ಕೂ ಯೋಗ್ಯವಾಗುತ್ತದೆ ಎಂಬುದು ಹಲವು ಹಿರಿಯ ಸಂಗೀತಗಾರರ ಅಭಿಪ್ರಾಯ.

## ಗಾಯಕ, ಗೀತ ಸಂಯೋಜಕ..

ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನ ಕೆಳದಿಯ ಪಕ್ಕದ ಹಾರೆಗೊಪ್ಪ ಎಂಬ ಊರಿನ ಹೆಚ್.ಎಸ್ ಶ್ರೀಪಾದ್ ಭಟ್ ಮಗನಾಗಿ ಜನಿಸಿದ ಸುಭಾಷ್ ಕೇವಲ 34 ವರ್ಷ ಬದುಕಿದರೂ ಆ ಊರಿಗೆ ಕೀರ್ತಿ ತಂದು ಕೊಟ್ಟ ಸಂಗೀತ ತಪಸ್ವಿ. ಸೊರಬ ನಾರಾಯಣಪ್ಪ ಹಾಗೂ ಹುಮಾಯುನ್ ಹರ್ಲಾಪುರ ಅವರಲ್ಲಿ ಆರಂಭದ ಹಿಂದೂಸ್ತಾನಿ ಸಂಗೀತವನ್ನು ಅಭ್ಯಾಸ ಮಾಡಿದ್ದ ಇವರು ಮುಂದೆ ಧಾರವಾಡ ವಿವಿಯಲ್ಲಿ ಸಂಗೀತ ವಿಭಾಗದ ಸ್ನಾತಕೋತ್ತರ ಪದವಿಯನ್ನು ಪಡೆದಿದ್ದರು. ಮುಂದೆ ವೆಂಕಟೇಶ್ ಕುಮಾರ್, ಕೈವಲ್ಯ ಕುಮಾರ್ ಗುರವ್ ಹಾಗೂ ಪರಮೇಶ್ವರ ಹೆಗಡೆ ಅವರಲ್ಲಿಯೂ ಶಿಷ್ಯವೃತ್ತಿ ಪಡೆದಿದ್ದರು. ತುಮಕೂರಿನ ಟಿವಿಎಸ್ ಶಿಕ್ಷಣ ಸಂಸ್ಥೆಯಲ್ಲಿ ಎಂಟು ವರ್ಷಗಳ ಕಾಲ ಸಂಗೀತ ಶಿಕ್ಷಕರಾಗಿ ಸೇವೆ ಸಲ್ಲಿಸಿದ್ದರು. ಹೆಚ್ಚು ಹೆಚ್ಚು ಕಾರ್ಯಕ್ರಮಗಳ ಒತ್ತಡದಿಂದಾಗಿ ಅಲ್ಲಿಂದ ಬಿಟ್ಟು ಬಂದು ಮತ್ತೆ ಹಾರೆಗೊಪ್ಪದಲ್ಲಿಯೇ ನೆಲೆಯೂರಿದ್ದರು. ಭೀಮನಕೋಣೆಯ ಸ್ವರಾಂಜಲಿ ತಂಡದ ಪ್ರಮುಖ ಗಾಯಕರಾಗಿದ್ದರು. ಸುಭಾಷ್ ನೀಡಿದ್ದು ಸಾವಿರಾರು ಸಂಗೀತ ಕಾರ್ಯಕ್ರಮಗಳು ಹಾಗೂ ಪಡೆದದ್ದು ನೂರಾರು ಪುರಸ್ಕಾರಗಳು.

ಹೆಗ್ಗೋಡಿನ ನೀನಾಸಂ ನಾಟಕಗಳಿಗೆ ಹಲವಾರು ಶೈಲಿಯಲ್ಲಿ ಪ್ರಯೋಗ ಮಾಡಿ ರಂಗಭೂಮಿಯ ಪಂಡಿತರಿಂದಲೂ ಸೈ ಎನಿಸಿಕೊಂಡಿದ್ದರು! ದೂರದರ್ಶನ ಹಾಗೂ ಹಲವು ವಾಹಿನಿಗಳಲ್ಲಿಯೂ ಕಾರ್ಯಕ್ರಮಗಳನ್ನು ನೀಡಿ ಜನಮೆಚ್ಚುಗೆ ಪಡೆದಿದ್ದರು. 'ನಮ್ಮ ರಂಗನ ಕಂಡೀರೇನೆ?' ಹಾಗೂ 'ರಾಮ ರಾಘವ ಕೃಷ್ಣ ಮಾಧವ' ಇವರ ಎರಡು ಜನಪ್ರಿಯ ಧ್ವನಿಮುದ್ರಿಕೆಗಳಾಗಿ ಆಡಿಯೊ ಮಾರುಕಟ್ಟೆಯನ್ನು ಸೇರಿದ್ದವು. ಈಗ ಇವರ ಮೊದಲ ಸೀಡಿ 'ನೆನಪಿನಲ್ಲಿ' ಹೊರಬಂದಿದೆ. ಜಗತ್ತಿಗೆ ವಿದಾಯ ಹೇಳಿದರೂ ಈ ಸೊಗಸಾದ ಕಂಠಸಿರಿಯಿಂದ ಹೊಮ್ಮಿದ ಗಾನಸುಧೆ ಮಾತ್ರ ನಿತ್ಯನಿರಂತರವಾಗಿ ಉಳಿದಿದೆ. ■